ಸೇತುವೆಗಳು ಇರುತ್ತವೆ. ಮಳೆಗಾಲದಲ್ಲಿ ಎರಡು ಸೇತುವೆಗಳ ಮೇಲೆ ಮಳೆನೀರು ಹರಿಯುವುದರಿಂದ ಒಂದೆರಡು ಗಂಟೆಗಳವರೆವಿಗೆ ಸಂಚಾರ ಸ್ಥಗಿತಗೊಳ್ಳುತ್ತದೆ. ಕಲ್ಲು ಕಟ್ಟಡದ ಈ ಎರಡು ಸೇತುವೆಗಳಲ್ಲಿನ ಕೆಲವು ಭಾಗಗಳಲ್ಲಿ ಸಂದುಗಾರೆ ಎದುದ ಹೋಗಿರುವುದು ಕಂಡು ಬಂದಿರುತ್ತದೆ. ಆದರೆ ಬಿರುಕು ಬಿಟ್ಟಿರುವುದು ಕಂಡು ಬಂದಿರುವುದಿಲ್ಲ.

ಆ) ಮಳೆ ನೀರು ಈ ಮುಳುಗು ಸೇತುವೆಗಳ ಮೇಲೆ ಹರಿಯುತ್ತಿರುವಾಗ ಸೇತುವೆ ದಾಟಬಾರದೆಂಬ ಎಚ್ಚರಿಕೆಯ ಫಲಕಗಳನ್ನು ಸೇತುವೆಯ ಎರಡು ಕಡೆ ಹಾಕಲಾಗಿದೆ. ಬಿದ್ದು ಹೋಗಿರುವ ಸಂದುರಾರೆಯ ದುರಸ್ತಿಯನ್ನು ಮಾಡಲಾಗುವುದು.

ಸುಳ್ಯ ತಾಲ್ಲೂಕು ದೊಡ್ಡತೋಟ ಕುಕ್ಕುಡಜಡ್ಕ ಪಾಜದಳ್ಳ ರಸ್ತೆ ಕಾಮಗಾರಿ

1007 (1458) ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕು ದೊಡ್ಡತೋಟ ಕುಕ್ಕುಡಜಡ್ಕ ಪಾಜದಳ್ಳ ರಸ್ತೆಯ ಕಿ.ಮೀ. 1.00 ರಿಂದ 10.80ರಲ್ಲಿ ಡಾಂಬರೀಕರಣ ಮಾಡಲಾಗುವುದೇ; ನಬಾರ್ಡ್ ಯೋಜನೆಯಲ್ಲಿ ಸೇರಿಸಿಕೊಂಡು ಮಂಜೂರಾತಿ ನೀಡಿದ್ದರೂ ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಈ ಕಾಮಗಾರಿಯು ನಬಾರ್ಡ್‌ನಿಂದ 98-99ರಲ್ಲಿ ರೂ 36.50 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಗೆ ನಾಲ್ಕು ಬಾರಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ದರಗಳು ಬಹಳ ಹೆಚ್ಚಿರುವುದರಿಂದ ತಿರಸ್ಕರಿಸಲಾಗಿದೆ.

ಆ) ಸದರಿ ಕಾಮಗಾರಿಯ ಅಂದಾಜನ್ನು ಪರಿಷ್ಕರಿಸುವ ಅವಶ್ಯಕತೆ ಇದ್ದು, ಇದನ್ನು ಪ್ರಸ್ತುತ ಕೈಗೊಳ್ಳಲು ಸಾಧ್ಯವಿಲ್ಲದ ಕಾರಣ ಈ ಕಾಮಗಾರಿಯನ್ನು ಕೈಬಿಡಲು ಯೋಜಿಸಲಾಗಿದೆ. ಈ ಕಾಮಗಾರಿಗೆ ಅಂದಾಜನ್ನು ಪರಿಷ್ಕರಿಸಿ ಮುಂದಿನ ಸಲಿನಲ್ಲಿ ಹೊಸ ಕಾಮಗಾರಿಗಳನ್ನು ಗುರುತಿಸುವಾಗ ಪರಿಗಣಿಸಲಾಗುವುದು.

ನ್ಯಾಯಾಂಗ ಇಲಾಖೆಯಲ್ಲಿ ನೇಮಕಾತಿ

1008 (1137) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ಇರುವ ಮುನ್ಸಿಫ್ ಕೋರ್ಟ್ ಸಿವಿಲ್ ಕೋರ್ಟ್‌ಗಳಿಗೆ ನೇಮಕವಾಗದೆ ಉಳಿದಿರುವ ಎಪಿಪಿ, ಪಿಪಿಗಳ ಸಂಖ್ಯೆ ಎಷ್ಟು?

ಆ) ಕಕ್ಷಿದಾರರ ಹಿತದೃಷ್ಟಿಯಿಂದ ಮೇಲ್ಕಂಡ ಎಪಿಪಿ ಪಿಪಿ ಗಳನ್ನು ನೇಮಕ ಮ್ಮಾ ಸರ್ಕಾರ ಕೈಗೊಂಡಿರುವ ಕ್ರಮ ಏನು?